ಕರ್ನಾಟಕ ಸರ್ಕಾರ

ಸಂಖ್ಯೆ: ಪಪೂಶಿಇ/ಸಿ-1/ಉ.ವರ್ಗ/2019-20(ಭಾಗ-2)

ನಿರ್ದೇಶಕರ ಕಚೇರಿ
ಪದವಿ ಪೂರ್ವ ಶಿಕ್ಷಣ ಇಲಾಖೆ,
18ನೇ ಅಡ್ಡ ರಸ್ತೆ, ಮಲ್ಲೇಶ್ವರಂ,
ಬೆಂಗಳೂರು-560 012
ದಿನಾಂಕ: 27/08/2019.

# ಜ್ಞಾಪನ

**ವಿಷಯ:-** ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಶೂನ್ಯ ದಾಖಲಾತಿ ಹೊಂದಿದ ವಿಷಯಗಳ ಉಪನ್ಯಾಸಕರ ಅಂತಿಮ ಪಟ್ಟಿ ಪ್ರಕಟಿಸುವ ಬಗ್ಗೆ.

**ಉಲ್ಲೇಖ:-** 1. ಈ ಕಛೇರಿ ಪತ್ರ ಸಂಖ್ಯೆ:ಪಪೂಶಿಇ/ಆಡಳಿತ-ಎ/ಹೆ.ಉ-ವರ್ಗ/2019-20,ದಿನಾಂಕ: 26-06-2019.
2. ಈ ಕಛೇರಿ ಸಮಸಂಖ್ಯೆ ಜ್ಞಾಪನ ದಿನಾಂಕ:24-07-2019.
3. ಈ ಕಛೇರಿ ಸಮಸಂಖ್ಯೆ ಜ್ಞಾಪನ ದಿನಾಂಕ:30-07-2019.
3. ಜಿಲ್ಲಾ ಉಪ ನಿರ್ದೇಶಕರ ವರದಿಗಳು.

*****

ಸರ್ಕಾರಿ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರುಗಳಿಗೆ 2018-19ನೇ ಸಾಲಿನ ವರ್ಗಾವಣೆ ಕೌನ್ಸೆಲಿಂಗ್ ನಡೆಸಲು ಉಲ್ಲೇಖ-1ರಂತೆ ಪ್ರಕ್ರಿಯೆ ಚಾಲನೆಗೊಳಿಸಲಾಗಿದೆ. ಈ ಸಾಲಿನ ವರ್ಗಾವಣೆ ಕೌನ್ಸೆಲಿಂಗ್‌ನಲ್ಲಿ ಶೂನ್ಯ ದಾಖಲಾತಿ ಹೊಂದಿದ ವಿಷಯಗಳ ಉಪನ್ಯಾಸಕರುಗಳ ಮಾಹಿತಿಯನ್ನು ಸಲ್ಲಿಸುವಂತೆ ಜಿಲ್ಲಾ ಉಪನಿರ್ದೇಶಕರುಗಳಿಗೆ ಕೋರಲಾಗಿತ್ತು. ಜಿಲ್ಲಾ ಉಪನಿರ್ದೇಶಕರು ನೀಡಿರುವ ವಿವರಗಳ/ವರದಿಯನುಸಾರ ಆಕ್ಷೇಪಣೆಗಳನ್ನು ಉಲ್ಲೇಖ-2ರಂತೆ ಕರೆಯಲಾಗಿತ್ತು. ಸದರಿ ಆಕ್ಷೇಪಣೆಗಳನ್ನು(ಜಿಲ್ಲಾ ಉಪನಿರ್ದೇಶಕರಿಂದ ಸ್ವೀಕೃತವಾದ) ಪರಿಶೀಲಿಸಿ ಮತ್ತು ಪರಿಗಣಿಸಿ ಅಂತಿಮ ಪಟ್ಟಿಯನ್ನು ಸಿದ್ಧಪಡಿಸಲಾಗಿದೆ. ಅಂತಿಮ ಪಟ್ಟಿಯನ್ನು ವಿಷಯವಾರು ಹಾಗೂ ಸೇವಾ ಜೇಷ್ಠತೆ ಆಧಾರ ಸಿದ್ಧಪಡಿಸಿ, ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ಸದರಿ ಅಂತಿಮ ಪಟ್ಟಿಯ ಆಧಾರದಂತೆ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರ ವರ್ಗಾವಣೆ ಕೌನ್ಸೆಲಿಂಗ್ ಪ್ರಕ್ರಿಯೆಯನ್ನು ನಡೆಸಲಾಗುತ್ತದೆ.

ಪ್ರಕಟಿಸಿರುವ ಅಂತಿಮ ಪಟ್ಟಿಗೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ, ದಿನಾಂಕ:31-08-2019 ರೊಳಗಾಗಿ ಪ್ರಾಚಾರ್ಯರಿಂದ ದೃಢೀಕರಿಸಿ, ಶ್ರೀಮತಿ ಉಷಾದೇವಿ, ಪ್ರಭಾರ ಉಪ ನಿರ್ದೇಶಕರು(ಆಡಳಿತ), ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು, ಇವರಿಗೆ ನೇರವಾಗಿ ಕಳುಹಿಸಲು ತಿಳಿಸಿದೆ. ನಿಗದಿತ ದಿನಾಂಕದ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.

**ರವರಿಗೆ:**

1. ರಾಜ್ಯದ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕರುಗಳಿಗೆ – ಅಗತ್ಯ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರುಗಳಿಗೆ ಹಾಗೂ